ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)
(An Autonomous College of University of Mysore: Re - Accredited by NAAC at 'A' Grade with a CGPA of 3.07)
ಸರಸ್ವತಿಪುರಂ, ಮೈಸೂರು–570 009
Ph No:0821-2548239 ♣ Principal 2548383 ♣ Fax: 2548240 ♣ : jssew.principal@gmail.com ♣ Website: http://www.jsscw.in

ದಿನಾಂಕ: 27.09.2024

# ಯುವ ಜನೋತ್ಸವ – 2024

## ಜಿಲ್ಲಾ ಮಟ್ಟದ ಮ್ಯಾರಥಾನ್ ಸ್ಪರ್ಧಾ ಕಾರ್ಯಕ್ರಮ

ದಿನಾಂಕ 27.09.2024 ಶುಕ್ರವಾರದಂದು ಬೆಳಗ್ಗೆ 7.30ಕ್ಕೆ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಮೈಸೂರು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಹಾಗೂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕ್ರೀಡಾ ಸಮಿತಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿರುವ ಯುವ ಜನೋತ್ಸವ 2024 ಪ್ರಯುಕ್ತ ಜಿಲ್ಲಾ ಮಟ್ಟದ ಮ್ಯಾರಥಾನ್ ಸ್ಪರ್ಧಾ ಕಾರ್ಯಕ್ರಮ ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಗೌರವಾನ್ವಿತ ಶ್ರೀ ದಿನೇಶ್ ಬಿ. ಜಿ. ಹಾಗೂ ಮೈಸೂರು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿಗಳಾದ ಡಾ. ಜಯಂತ್ ಎಂ. ಎಸ್., ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಅಶಾದ್ ಉರ್ ರಹಮಾನ್ ಷರೀಫ್, ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮ, ಶೈಕ್ಷಣಿಕ ಡೀನ್ ಡಾ. ರೇಚಣ್ಣ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಶ್ರೀಮತಿ ಅನುಷಾ, ಡಾ. ಸಿ. ಮಹೇಂದ್ರ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ರಶ್ಮಿ ಎ. ಕ್ರೀಡಾ ಸಮಿತಿಯ ಸದಸ್ಯರುಗಳ ಸಮ್ಮುಖದಲ್ಲಿ ಉದ್ಘಾಟಿಸಲಾಯಿತು.

ಮೈಸೂರು ಜಿಲ್ಲೆಯ ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಒಟ್ಟು 250ಕ್ಕೂ ಅಧಿಕ ಸ್ಪರ್ಧಿಗಳು ಮ್ಯಾರಥಾನ್‌ನಲ್ಲಿ ಭಾಗವಹಿಸಿದರು, ವಿಜೇತರಿಗೆ ನಗದು ಬಹುಮಾನ ನೀಡಲಾಯಿತು. ಮಹಿಳೆಯರ ವಿಭಾಗದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನ ಐವರು ವಿದ್ಯಾರ್ಥಿನಿಯರು ಬಹುಮಾನ ಪಡೆದಿದ್ದು, ಮಾನಸ ಎನ್.ಎಸ್. ಪ್ರಥಮ ಬಹುಮಾನದೊಂದಿಗೆ 5000 ನಗದು ಪಡೆದಿರುತ್ತಾರೆ. ಭವ್ಯಕಲಾ ದ್ವಿತೀಯ ಬಹುಮಾನದೊಂದಿಗೆ 3500 ನಗದು, ವಂದನಾ ಎ. ಎನ್. ಮೂರನೇ ಬಹುಮಾನದೊಂದಿಗೆ 2500 ನಗದು ಪಡೆದರು. ಹುಣಸೂರು ದೇವರಾಜ ಅರಸ್ ಪದವಿ ಕಾಲೇಜಿನ ಸಂಗೀತರವರಿಗೆ, ಜೆಎಸ್‌ಎಸ್ ಮಹಿಳಾ ಕಾಲೇಜಿನ ಸ್ನೇಹ ವಿ. ಹೆಚ್., ಎಸ್ ಸಿಂಧುರವರಿಗೆ 1000 ಮೊತ್ತದ ಸಮಾಧಾನಕರ ಬಹುಮಾನ ದೊರೆತಿದೆ.

ಪುರುಷ ವಿಭಾಗದಲ್ಲಿ ಟಿ. ನರಸೀಪುರದ ಪಿ.ಆರ್.ಎಂ. ಕಾಲೇಜಿನ ದೊರೆಸ್ವಾಮಿಗೆ ಪ್ರಥಮ ಬಹುಮಾನ, ವಿಶ್ವ ದ್ವಿತೀಯ ಬಹುಮಾನ, ಶ್ರೀನಿವಾಸ್ ಮೂರನೇ ಬಹುಮಾನ, ಪುನೀತ್ ಹೆಚ್.ಆರ್. ರಾಕೇಶ್, ನಂದೀಶ್, ರಮೇಶ್ ಎನ್, ಈ ನಾಲ್ವರು ಸಮಾಧಾನಕರ ಬಹುಮಾನ ಪಡೆದರು.

ಮ್ಯಾರಥಾನ್ ಸ್ಪರ್ಧೆಯು ಜೆಎಸ್‌ಎಸ್ ಮಹಿಳಾ ಕಾಲೇಜಿನ ಮುಂಭಾಗದಲ್ಲಿ ಆರಂಭಗೊಂಡು ರಾಮಸ್ವಾಮಿ ವೃತ್ತದಲ್ಲಿ ಎಡಕ್ಕೆ ತಿರುಗಿ ಮಹಾರಾಣಿ ವಿಜ್ಞಾನ ಕಾಲೇಜಿನ ಕಡೆಯಿಂದ ಜಿಲ್ಲಾಧಿಕಾರಿ ಕಛೇರಿ ಹಾಗೂ ಓವೆಲ್ ಮೈದಾನದಿಂದ, ಕಾಲೇಜಿನಲ್ಲಿ ಅಂತ್ಯಗೊಂಡಿತು.





Poornima M.
ಪ್ರಾಂಶುಪಾಲರು
ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)
ಸರಸ್ವತಿಪುರಂ, ಮೈಸೂರು-570 009